# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
## ನವನಗರ, ಹುಬ್ಬಳ್ಳಿ

ಇ-ಮೇಲ್: examkslu@gmail.com ಫೋನ್ ನಂ: 0836-2222900


**ಪರೀಕ್ಷಾ ವಿಭಾಗ**

ಸಂಖ್ಯೆ: ಕರಾಕಾವಿ/ಪರೀಕ್ಷಾ ವಿಭಾಗ/2024-25/2330. ದಿನಾಂಕ: 24-03-2025

**ಸುತ್ತೋಲೆ**

**ವಿಷಯ:** 2018-19 ರಿಂದ 2023-24ನೇ ಸಾಲಿನವರೆಗಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವ ಕುರಿತು.

**ಉಲ್ಲೇಖ:**
1. ಸಂಖ್ಯೆ: ಕರಾಕಾವಿ/ಪರೀಕ್ಷಾ ವಿಭಾಗ/2024-25/1786 ದಿನಾಂಕ 18.012.2024
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.03.2025

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿಗಳ ಮನವಿ ಪತ್ರಗಳ ಮೇರೆಗೆ ದಿನಾಂಕ 18ನೇ ಡಿಸೆಂಬರ್ 2024 ರಂದು ಸುತ್ತೋಲೆ ಸಂಖ್ಯೆ ಕರಾಕಾವಿ/ಪರೀಕ್ಷಾ ವಿಭಾಗ/2024-25/1786 ದಿನಾಂಕ 18.12.2024 ರ ಮೂಲಕ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯದ 80-20 ಅಂಕಗಳ ಮಾದರಿಯ ವಿದ್ಯಾರ್ಥಿಗಳ ಆಂತರಿಕ ಅಂಕಗಳಿಗೆ ಸಂಬಂಧಿಸಿಂತೆ ದಿನಾಂಕ 17ನೇ ಜನವರಿ 2025ರ ವರೆಗೆ ತಮ್ಮ ಆಂತರಿಕ ಪರೀಕ್ಷೆಗಳನ್ನು ಕಾನೂನು ಮಹಾವಿದ್ಯಾಲಯಗಳಲ್ಲಿ ಜರುಗಿಸಿ ವಿದ್ಯಾರ್ಥಿಗಳ ದಾಖಲಾತಿಗಳನ್ನು ಕಾನೂನು ಮಹಾವಿದ್ಯಾಲಯಗಳ ಮೂಖಾಂತರ ನೀಡಲು ಅವಕಾಶವನ್ನು ನೀಡಲಾಗಿತ್ತು. ಆದರೆ ಕೆಲವು ವಿದ್ಯಾರ್ಥಿಗಳು ನಿಗದಿ ಪಡಿಸಿದ ದಿನಾಂಕವನ್ನು ಮೀರಿ ಪುನಃ ಈಗ ತಮ್ಮ ಆಂತರಿಕ ಅಂಕಗಳನ್ನು ಸರಿಪಡಿಸಿಕೊಳ್ಳಲು ಅವಕಾಶವನ್ನು ಕೋರಿರುತ್ತಾರೆ. ಅದರಂತೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಕೊನೆಯ ಅವಕಾಶವನ್ನು ಕಲ್ಪಿಸಿ ಒಂದು ವಿಷಯಕ್ಕೆ 1000/- ರೂಪಾಯಿಗಳು (ಒಂದು ಸಾವಿರ ರೂಪಾಯಿಗಳು ಮಾತ್ರ) ದಂಡವನ್ನು ಭರಣ ಮಾಡಿ ಆಂತರಿಕ ಅಂಕಗಳ ಪರೀಕ್ಷೆಯನ್ನು ನಡೆಯಿಸಿ ಸಂಬಂಧ ಪಟ್ಟ ದಾಖಲಾತಿಗಳೊಂದಿಗೆ ದಂಡ ಪಾವತಿಸಿದ ರಶೀದಿಯನ್ನು ದಿನಾಂಕ 24.04.2025ರ ಒಳಗಾಗಿ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳ ಪ್ರಾಂಶುಪಾಲರು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೆನೆಂದರೆ ತಮ್ಮ ಮನವಿಯ ಪತ್ರದ ಮೇರೆಗೆ ಈಗಾಗಲೇ 80-20 ಅಂಕಗಳ ಮಾದರಿಯ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸರಿಪಡಿಸಿ ನವಿಕರಿಸಿದ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಆದಾಗ್ಯೂ ಈ ಹಿಂದಿನ ಪರೀಕ್ಷೆಗಳಿಗೆ ಸಂಬಂಧಿಸಿದ ಬಾಕಿ ಇರುವ ಅಥವಾ ಆನ್‌ಲೈನ್‌ನಲ್ಲಿ ಫಲಿತಾಂಶ ಪ್ರಕಟಿಸಲು ಸಾಧ್ಯವಾಗದ 80-20 ಅಂಕಗಳ ಮಾದರಿಯ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಮಹಾವಿದ್ಯಾಲಯಗಳಿಗೆ ವಿಶ್ವವಿದ್ಯಾಲಯದಿಂದ ಸೂಚಿಸಿದ ದಿನಾಂಕದಂದು ವಿದ್ಯಾರ್ಥಿಗಳ ಆಂತರಿಕ ಅಂಕಗಳಗೆ ಸಂಬಂಧ ಪಟ್ಟ ದಾಖಲಾತಿಗಳೊಂದಿಗೆ ಬಂದು ಫಲಿತಾಂಶವನ್ನು ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ. ಆದ್ದರಿಂದ ತಾವುಗಳು ಈ ವಿಷಯವನ್ನು ಸಂಬಂಧ ಪಟ್ಟ ವಿದ್ಯಾರ್ಥಿಗಳ ಗಮನಕ್ಕೆ ತಂದು ಆಂತರಿಕ ಅಂಕಗಳ ಪರೀಕ್ಷೆಯನ್ನು ಜರುಗಿಸಿ ಅಗತ್ಯ ದಾಖಲಾತಿ ಮತ್ತು ಎಕ್ಸ್‌ಎಲ್ ಸಾಫ್ಟ್ ಕಾಪಿಯನ್ನು ಇ-ಮೇಲ್: examkslu@gmail.com ಮತ್ತು ಹಾರ್ಡ್ ಕಾಪಿಯನ್ನು ಪತ್ರದ ಮೂಲಕ ನಿಗದಿತ ದಿನಾಂಕದೊಳಗಾಗಿ ಪರೀಕ್ಷಾ ವಿಭಾಗಕ್ಕೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

**ಕುಲಸಚಿವರು (ಮೌಲ್ಯಮಾಪನ)**

**ಗೆ,**
ಪ್ರಾಂಶುಪಾಲರು,
ಎಲ್ಲ ಸಂಯೋಜಿತ ಕಾನೂನು ಮಾಹವಿದ್ಯಾಲಯ,
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ ಹುಬ್ಬಳ್ಳಿ

ಪ್ರತಿಃ
1. ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಕಾವಿ, ನವನಗರ ಹುಬ್ಬಳ್ಳಿ.